

# ಹಿಮಾಲಯದ ಹೈದ ಕರಾವಳಿಗೆ ಬಂದಾಗ...

**ಹಿಮಾಲಯ ಪರ್ವತಗಳ ತಪ್ಪಲಿನಲ್ಲಿ ಹುಟ್ಟಿ ಬೆಳೆಯುವ 'ನವರಂಗ ಹಕ್ಕಿ' ಭಾರತದ ಅತ್ಯಂತ ಸುಂದರ ಪಕ್ಷಿಗಳಲ್ಲೊಂದು. ನವರಂಗದ ಒಂದೊಂದು ಬಣ್ಣವೂ ಚಿತ್ತಾಕರ್ಷಕ. ಅದರ ಗರಿಗಳ ಬೀಸು, ಹಾಡು, ಕೇಕೆ, ಜೀಕು, ಎಲ್ಲವೂ ಆಕರ್ಷಕ.**

**■ ಪ್ರಸಾದ ಶೆಣೈ ಆರ್.ಕೆ.**

'ಸರಿ, ಇಷ್ಟು ದಿನದಿಂದ ನನ್ನದೊಂದು ಫೋಟೊ ತೆಗೀಬೇಕು ಅಂತ ಕಾಯ್ತಾ ಇದ್ದೀಯ, ತೆಗಿ... ನಿಮ್ಮ ಕ್ಷುದ್ರ ಕ್ಯಾಮೆರಾಕ್ಕೆಲ್ಲಾ ಅಷ್ಟು ಸುಲಭಕ್ಕೆ ಸಿಗುವ ಹಕ್ಕಿ ಅಲ್ಲ ನಾನು! ಆದ್ರೂ ಪಾಪ, ಇಷ್ಟು ದಿನಗಳಿಂದ ನಿನ್ನನ್ನು ನೋಡ್ತಾ ಇದ್ದೇನೆ, ಅಪಾಯಕಾರಿ ಮನುಷ್ಯನ ಹಾಗೆ ಕಾಣಿಸಲ್ಲ ನೀನು, ನಂಬಿಕೆ ಇದೆ ನಿನ್ನ ಮೇಲೆ' ಎಂದು ಕಿಟಕಿಯಿಂದ ತದೇಕಚಿತ್ತವಾಗಿ ನೋಡುತ್ತಿದ್ದ ನನ್ನನ್ನೇ ನೋಡಿ ನವರಂಗ ಹಕ್ಕಿ ಪಿಸುಗುಟ್ಟಿದಂತೆ ಅನ್ನಿಸಿತು. ಅದೇ ಧೈರ್ಯದಲ್ಲಿ ಕ್ಯಾಮೆರಾ ಹಿಡಿದು ಟಕ ಟಕ ಟಕ ಎಂದು ನವರಂಗ ಹಕ್ಕಿಯ ಚಿತ್ರವನ್ನು ಒಂದಷ್ಟು ಭಂಗಿಯಲ್ಲಿ ಸೆರೆಹಿಡಿದೆ. ಅದು ಗರಿಬಿಚ್ಚಿ ಹಾರುವ ಚಿತ್ರ ಮಾತ್ರ ಸಿಗಲೇ ಇಲ್ಲ.

ಒಮ್ಮೆ ಆಕಾಶ ನೋಡುವುದು, ಮತ್ತೊಮ್ಮೆ ಮಣ್ಣೊಳಗೆ ಅವಿತಿದ್ದ ಕೀಟಗಳ ಹೆಡೆಮುರಿ ಕಟ್ಟಿ ಯಾವುದೋ ಒಂದು ಧ್ಯಾನದಲ್ಲಿ ಸುಯ್ಯೆಂದು ಕೀಟಗಳನ್ನು ಮುಕ್ಕುವುದು, ಮತ್ತೆ ಒಂದೊಂದೇ ಲಾಗ ಹಾಕಿ ಇನ್ನೂ ಏನೇನು ತಿಂಡಿ ಸಿಗಬಹುದು ಎಂದು ಅಪಾರ ಏಕಾಗ್ರತೆಯಲ್ಲಿ ಸಂದುಗೊಂದುಗಳಲ್ಲಿ ಹುಡುಕುವುದು ಮಾಡತೊಡಗಿತು.

ಹಕ್ಕಿಯ ಏಕಾಗ್ರತೆಗೆ ಭಂಗ ಬರದಂತೆ ನವರಂಗ ಹಕ್ಕಿಯ ವಿವಿಧ ಚೇಷ್ಟೆಗಳನ್ನು ಕ್ಲಿಕ್ಕಿಸಿದೆ. ಇನ್ನೂ ಕ್ಲಿಕ್ಕಿಸಬೇಕು ಎನ್ನುವ ಸ್ವಾರ್ಥದಲ್ಲಿದ್ದಾಗಲೇ 'ಅತಿಯಾಗಿ ಆಡಿದ್ರೆ ಕೈಗೆ ಸಿಗಲ್ಲ ನಾನು' ಎನ್ನುವಂತೆ ನನ್ನನ್ನೇ ದುರುಗುಟ್ಟಿ ನೋಡಿ, ಮಿಂಚಿನಂತೆ ಹಾರಿಹೋಯ್ತು. ಅದು ಗಾಳಿಯಲ್ಲಿ ತೇಲಿಹೋದ ವೇಗ, ಹಾಗೆ ತೇಲಿಹೋದಾಗ ಮೂಡಿದ ಅದರ ಹಾರಾಟದ ಹಿತವಾದ ಸದ್ದು, ಅದಕ್ಕಿಂತಲೂ ಅದು ರೆಕ್ಕೆ ಬೀಸಿದಾಗ 'ಲೋಕದ ಎಲ್ಲಾ ಬಣ್ಣಗಳನ್ನು ನಾನು ನನ್ನ ರೆಕ್ಕೆಯಲ್ಲೇ ತುಂಬಿಕೊಂಡಿದ್ದೇನೆ ನೋಡು' ಎಂದು ನವರಂಗ ಕಾಣಿಸಿದ ತನ್ನ ಕಾಮನಬಿಲ್ಲಿನಂತಹ ಮೈಸಿರಿ, ಇವನ್ನೆಲ್ಲಾ ನೋಡಿ ಸೋಜಿಗವಾಯ್ತು.

ಕಳೆದ ಕೆಲವೊಂದು ದಿನಗಳಿಂದ ಹೇಗಾದರೂ ಮಾಡಿ ನವರಂಗ ಹಕ್ಕಿಯ ಫೋಟೊ



